

## ಹೀಗೊಬ್ಬ ‘ಊರಮಗ’ ಭಾರತಕುಮಾರ

ಚಿತ್ರದಲ್ಲಿರುವ ಕೆಂಗಂದು ಬಣ್ಣದ ಈ ಕರು ಹೆಚ್‌ಎಫ್ ಜಾತಿಗೆ ಸೇರಿದ್ದು, ನಮ್ಮ ಪಕ್ಕದೂರಿನಲ್ಲಿ ಜನಿಸಿದೆ. ಹುಟ್ಟಿದ ಕೆಲವೇ ಗಂಟೆಗಳಲ್ಲಿ ಇದರ ಮಾಲೀಕ ತಾಯಿಯಿಂದ ಬೇರ್ಪಡಿಸಿ ಪೇಟೆಗೊಯ್ದು ಮಾರಿ ಹಣ ಪಡೆಯುವಂತೆ ಆಟೊ ಚಾಲಕರಿಗೆ ಕೊಟ್ಟಿದ್ದಾರೆ. ಕಣ್ಬಿಡುವ ಮುನ್ನವೇ ಕಣ್ಮುಚ್ಚಬೇಕಾಗಿದ್ದ ಈ ಹಸುಳೆಯನ್ನು ಚಾಲಕ ಸಂತೆಗೊಯ್ಯದೇ ನಮ್ಮೂರಿಗೆ ತಂದು ಬಿಟ್ಟಿದ್ದಾರೆ. ಸುದ್ದಿ ತಿಳಿದ ನಮ್ಮೂರ ರೈತರು ಈ ಹಾಲುಗರುವನ್ನು ಸೀದಾ ‘ಹಾಲಿನ ಡೈರಿ’ಗೆ ಕರೆತಂದು ಬಾಟಲಿಯಲ್ಲಿ ಹಾಲುಣಿಸಿದ್ದಾರೆ. ಇಲ್ಲಿಂದ ಈ ಕರುವಿಗೆ ದಿನಕ್ಕೆ ಮೂರು ಹೊತ್ತು ಹಾಲುಣಿಸಲು ನಮ್ಮೂರಿನ ರೈತರೆಲ್ಲರೂ ಸೇರಿ ದಿನನಿತ್ಯ ‘ಕರುವಿನ ಪಾಲಿಗಿಷ್ಟು’ ಎಂದು ಹಾಲನ್ನು ತೆಗೆದಿರಿಸುತ್ತಾ ಹಾಲುಣಿಸುತ್ತಾ ಬಂದಿದ್ದಾರೆ.

ಮೊದಮೊದಲಿಗೆ ಕೃಶವಾಗಿದ್ದ ಕರುವೀಗ ದಷ್ಟಪುಷ್ಟವಾಗಿ ಬೆಳೆಯುತ್ತಿದ್ದು ಹುಲ್ಲನ್ನೂ ತಿನ್ನುತ್ತಿದೆ. ಬೆಳಿಗ್ಗೆ ಸಂಜೆ ಹಾಲುಣ್ಣುತ್ತಾ ರಾತ್ರಿ ವೇಳೆಯಲ್ಲಿ ಗುಡಿಯಲ್ಲಿ ತಂಗುತ್ತಾ ಹಾಯಾಗಿರುವ ಈ ಕರು ಎಲ್ಲರಿಗೂ ಅಚ್ಚುಮೆಚ್ಚಿನ ಜೀವವಾಗಿದೆ. ಹೈನುಗಾರಿಕೆಯಲ್ಲಿ ಗಂಡುಕರುಗಳು ಜನಿಸಿದರೆ ಬಹುತೇಕ ರೈತರು ಅವುಗಳನ್ನು ಸಾಕದೆ ಮಾರಾಟ ಮಾಡಲು ಇಲ್ಲವೇ ಊರಾಚೆ ಬಿಟ್ಟುಬರಲು ಮುಂದಾಗುತ್ತಾರೆ. ಇದಕ್ಕೆ ಹಾಲಿನ ಇಳುವರಿ ಕಡಿಮೆಯಾಗುವ ಇಲ್ಲವೇ ದೇಶೀಯ ಹೋರಿಗಳಂತೆ ಇವುಗಳು ಭುಜ ಹೊಂದಿಲ್ಲದಿರುವುದರಿಂದ ಬೇಸಾಯಕ್ಕೂ ಯೋಗ್ಯವಲ್ಲವೆಂಬ ಮುಂತಾದ ಕಾರಣಗಳಿವೆ. ಅಂದಹಾಗೆ ಹಳ್ಳಿಗರ ಅಂತರಂಗದಲ್ಲಿ ಅಡಗಿದ್ದ ಮಾನವೀಯತೆಯನ್ನು ಬಡಿದೆಬ್ಬಿಸಿದ ಈ ಕರುವಿಗೆ ಆಗಸ್ಟ್ 15ರಂದು ಭಾರತಕುಮಾರನೆಂದು ಶಾಲಾಮಕ್ಕಳು ನಾಮಕರಣ ಮಾಡಿದ್ದಾರೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ



## ಸಂಚಾರಿ ಸಲೂನ್

ಕೆಲ ದಿನಗಳ ಹಿಂದೆ ಉತ್ತರ ಭಾರತ ಪ್ರವಾಸಕ್ಕೆ ಹೋಗಿದ್ದೆ. ಆಗ ‘ಸಂಚಾರಿ ಸಲೂನ್’ ನೋಡಿ ಆಶ್ಚರ್ಯವಾಯ್ತು. ಈ ಸಲೂನ್‌ಗೆ ಕಟ್ಟಡದ ಬಾಡಿಗೆ ಕಟ್ಟಬೇಕಿಲ್ಲ, ಗಿರಾಕಿಗಳಿಗೂ ಕಾದು ಕೂರಬೇಕೆಂದಿಲ್ಲ. ಗ್ರಾಹಕರ ಸೆಳೆಯಲು ಹೈಟೆಕ್ ಸ್ಪರ್ಶವೂ ಇಲ್ಲ. ದ್ವಿಚಕ್ರ ವಾಹನದ ವಿನ್ಯಾಸ ಬದಲಿಸಿ ಚಿಕ್ಕ ಕೊಠಡಿಯಂತೆ ಮಾಡಿಕೊಳ್ಳಲಾಗಿದೆ. ಪುಟ್ಟ ಕೊಠಡಿಯಲ್ಲೇ ಕನ್ನಡಿ, ಕುರ್ಚಿ, ಕಟ್ಟಿಂಗ್ ಸಾಮಗ್ರಿಗಳನ್ನು ಇಟ್ಟುಕೊಂಡು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಂಚರಿಸಿ ಬದುಕು ಕಟ್ಟಿಕೊಳ್ಳುವುದೇ ಇವರ ಜೀವನ.

‘ರಾಜಾ ಹಿಂದೂಸ್ತಾನಿ’ ಸಂಚಾರಿ ಸಲೂನ್‌ನ ದರ ಪಟ್ಟಿ ನೋಡಿದರೆ ಅಚ್ಚರಿಯಾಗುತ್ತೆ. ಹೇರ್ ಕಟ್ಟಿಂಗ್‌ಗೆ ₹30, ಶೇವಿಂಗ್‌ಗೆ ₹20. ಮಾಡರ್ನ್ ಸಲೂನ್‌ಗಳಿಗೆ ಒಮ್ಮೆ ಕಾಲಿಟ್ಟರೆ ತಲೆಗೂದಲಿಗೆ ಕೈಹಾಕಿದಂತೆ ಜೇಬಿಗೂ ಹಿಗ್ಗಾಮುಗ್ಗಾ ಕತ್ತರಿ ಬೀಳುತ್ತದೆ. ಒಂದೊಂದು ದಿನ ಒಂದೊಂದು ಪ್ರದೇಶ, ಹಳ್ಳಿ ಕಡೆ ಓಡುವ ಈ ಸಂಚಾರಿ ಸಲೂನ್‌ನ ಮಾಲೀಕನಿಗೆ ಬೈಕ್‌ಗೆ ಆಗಾಗ್ಗೆ ಪೆಟ್ರೋಲ್ ತುಂಬಿಸುವುದೊಂದೇ ತುಸು ಭಾರದ ವಿಚಾರ.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

